ಮೈಸೂರ ಗೆಜೆಟ್.

ನಂ. 27 ಸರ್ಕಾರದಿಂದ ಫಾಯಿಷ್ ಆದ್ದು. ಸ್ ೧೮೮೯

ಬೆಂಗಳೂರು, ಶನಿವಾರ, ಜುಲೈ ತಾ|| 6, ಸ್ ೧೮೮೯.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ಸ್ ಜಡ್ಜ್‌ರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್‌ಫಿಸ್ ನೋಟಿಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಸುಗಳು ವ ರೆಗ್ಯುಲೇಷ್ಷಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 14ನೇ ಜೂ ೧೮೮೯.

ಕ್ಯಾಂಪ್ ನಂ. 253.—1889ನೇ ಇಸವಿ ಜುಲೈ 1ನೇ ತಾರೀಖು ಮತ್ತು ಆತರುವಾಯ ಮೈಸೂರು ದೇಶದ ಖಜಾನೆಗಳಿಂದ ಬಳದೇಶದ ಮನಿಆರ್ಡರುಗಳಾಗಲಿ ಯಿಂಪಿರಿಯಲ್ ಯಾ ಪರಾಯಿದೇಶದ ಮನಿಆರ್ಡರ್ ಹಣ ಸಂದಬಗ್ಗೆ ರಚೀತಿಯಾಗಲಿ ಕೊಡಲ್ಪಡುವ ಪದ್ಧತಿಯು ಮನ್ನಾ ಮಾಡಲ್ಪಟ್ಟಿರುತ್ತೆ. ಪರಂತು ಸದರೀ ಖಜಾನೆಗಳಲ್ಲಿ ಇದಕ್ಕೆ ಪೂರ್ವವೇ ಕೊಡೋಣಾಗಿ ವಾಯಿದೆ ಮೀರದಂಥಾ ಮನಿ ಆರ್ಡರ್‌ಗಳಿಗೆ ಹಣ ಪಾವತಿ ಮಾಡಲ್ಪಜುವದಲ್ಲದೆ ಯಿದುವರಿಗೆ ಜಾರಿಯಲ್ಲಿ, ಯಿದ್ದ ಮನಿಆರ್ಡರ್ ರೂಲ್‌ಸುಗಳನುಸರಿಸಿ ಆಂಥಾ ಮನಿ ಆರ್ಡರ್‌ಗಳಿಗೆ ಸಂಬಂಧಪಟ್ಟ ಸಂಗತಿಗಳಲ್ಲಿ ದರಖಾಸ್ತುದಾರರ ಅರ್ಜಿಗಳಿಗೆ ಗಮನಕೊಡುವರು.

ತಮ್ಮಾಂ ತರಹೆಯ ಮನಿಆರಡರುಗಳಿಗಾಗಿ ಬರುವ ಹೊಸದರಖಾಸ್ತುಗಳು ಪೋಸ್ಟ್‌ಫೀಸು ಮನಿಆರಡರ್ ರೂಲಸಿ ಅನುಸರಿಸಿವುನಿ ಆರಡರ್ ಕೆಲಸಗಳನ್ನು ನಡಿಸುವ ಬಗ್ಗೆ ಅರ್ಜಿರಾದಂಥಾ ಮತ್ತು ಮೈಸೂರು ದೇಶದಲ್ಲಿ ಸ್ಥಾಪಿರುವಂಥಾ ಪೋಸ್ಟ್‌ಫೀಸುಗಳಿಗೆ ರಿಫರ್ ಮಾಡಲ್ಪಡತಕ್ಕದ್ದು.

ಕ್ಯಾಂಪ್ ನಂ. 259.—ಸ್ ೧೮೮೮ನೇ ಇಸವಿಯ IVನೇ ನಂಬರ್ ರೆಗ್ಯುಲೇಷ್ಷ ಆಜ್ ಮೈಸೂರು ಲ್ಯಾಂಡ್ ರವಿನ್ಯೂ ಕೋಡಿನ 236ನೇ ಸೆಕ್ಷನಿನ ಯರಡನೇ ಪ್ಯಾರಾ ಅನುಸರಿಸಿ ಸದರೀ ಕೋಡಿನ VIII ಮತ್ತು IXನೇ ಚಾಪ್ಟರುಗಳ ನಿಯಮುಗಳು ಇದರಡಿ

ಕಂಡ ಪರಭಾರೇ ಮಾಡಲ್ಪಟ್ಟ ಗ್ರಾಮಗಳಿಗೆ ಲಗಾವ. ಮಾಡಲ್ಪಡತಕ್ಕದ್ದೆಂದು ಮೈಸೂರು ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದ್ದೂರವರು ಆಜ್ಞಾಪಿಸಿರುತ್ತಾರೆ.

	ಗ್ರಾಮಗಳ ಹೆಸರು.		ಯಾವ ತಾಲ್ಲೂಕಿನಲ್ಲಿರತಕ್ಕದ್ದು.
1	ಸರ್ವಮಾನ್ಯ ಅಂಬಳೆ	}	ನಂಜನಗೂಡು
2	ಡಿಟೋ ಕಾಸಲೂರು		
3	ಜೋಡೀ ರಾಂಪುರ ..	..	ಶ್ರೀರಂಗಪಟ್ಟಣ
4	ಉಕ್ಕಲಗಿರಿ ..	..	ತಿರುಮಕೂಡ್ಲುನರಸೀಪುರ
5	ನಲ್ಲತಂದಿ ..	}	ನಾಗಮಂಗಲ
6	ಮುತ್ತಸಂದ್ರ ..		
7	ಮೊಡ್ಡಬೆಲೆ ..		
8	ಕಲ್ಲಗೊಂಡಹಳ್ಳಿ ..		ಬೆಂಗಳೂರು

ತಾರೀಖು 1ನೇ ಜೂಲೈ 1889.

ನಂ. 69.—ಸ್ಯ 1878ನೇ ಇಸವಿಯ ಫಾರೆಸ್ಟ್ ರೂಲ್ಸಿನ 23ನೇ ಸೆಕ್ಷನ್ ಅನುಸರಿಸಿ ವ 1886ನೇ ಇಸವಿಯ ಏಪ್ರಿಲ್ 3ನೇ ಮಕ್ಕುಮಿನ ಮೈಸೂರ ಗೆಜೆಟ್ಟಿನಲ್ಲಿ ಫಯಿಷ್ ಮಾಡೋಣಾದ 1886ನೇ ಇಸವಿ ಮಾರ್ಚಿ 3ನೇ ಮಕ್ಕುಂ 239ನೇ ನಂಬರ್ ಇಟ್ಟು ಹಾರನ್ನ ತಿದ್ದುಪಾಟು ಮಾಡಿ, ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಡಿಸ್ಟ್ರಿಕ್ಟ್ ಜಂಗ್ಲಿಗಳಲ್ಲಿ ಸಾದೆ ಕಡಿಯುತಕ್ಕ ಬಗ್ಯೆ ಇದ್ದಲನ್ನ ಸುಡುವಬಗ್ಗೂ ಇದರಡಿ ಕಂಡ ಮೇರಿಗೆ ಸೀನಿಯಾರೇಜ್ ತಿರ್ವೆಗಳು ವಸೂಲಾಗತಕ್ಕದ್ದೆಂದು ವಿಧಿಸೋಣಾಗಿರುತ್ತದೆ:—

ಸಾದೆ.—

	ತೀರ್ವೆ ಪಾವತಿಯಿಂದ ಮೊದಲು ಲೈಸೆನ್ಸ್ ಪಡೆದರೆ.		ತೀರ್ವೆ ಪಾವತಿಯಿಂದ ಮೊದಲು ಲೈಸೆನ್ಸ್ ಪಡೆಯದಿದ್ದರೆ.
ಚಕ್ಕಹಾ ಭಂಡೀ ಬೋಜೆ 1ಕ್ಕೆ	6 ಆಣೆ.	..	7 ಆಣೆ.
ವಡ್ಡರಭಂಡಿ ಬೋಜೆ 1ಕ್ಕೆ	4 „	..	5 „
ಯತ್ತಿನಬೋಜೆ 1ಕ್ಕೆ	1 „ 3 ಪೈ	..	1 „ 6 ಪೈ
ಕತ್ತೆಬೋಜೆ 1ಕ್ಕೆ	9 ಪೈ	..	1 „
ಲೋಸೈಡೆಡ್ ಅಂದರೆ ಚಿಕ್ಕವ್ಯಾಗ್ಗ 1ಕ್ಕೆ	1—8—0	..	1—12—0
ಹೈಸೈಡೆಡ್ ಅಂದರೆ ದೊಡ್ಡವ್ಯಾಗ್ಗ 1ಕ್ಕೆ	3—0—0	..	3—8—0
ಕವರ್ಡ್ ಅಂದರೆ ಛಾವಣಿವುಳ್ಳ ವ್ಯಾಗ್ಗ 1ಕ್ಕೆ	4—0—0	..	4—10—0

ಯಿದ್ದಲು.—

				ರೂ.	ಆ.
ಭಂಡಿ ಬೋಜೆ 1ಕ್ಕೆ	..	..	..	2	8
ಯತ್ತಿನ ಬೋಜೆ 1ಕ್ಕೆ	..	..	..	0	8
ಕತ್ತೆಬೋಜೆ 1ಕ್ಕೆ	..	..	..	0	4
ತಲೇ ಬೋಜೆ 1ಕ್ಕೆ	..	..	..	0	2

2. ಯಾವ ಮನುಷ್ಯನೇ ಆಗಲಿ ಮೇಲ್ಕಂಡಂತೆ ತೀರ್ವೆಯನ್ನ ಪಾವತೀ ಮಾಡಿ ಅಮಲ್ದಾರ್ ಯಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಅಥವಾ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರಿಂದ ಕ್ರಮವಾಗಿ ಅಧಿಕಾರ ಕೊಡಲ್ಪಟ್ಟ ಇತರ ಉದ್ಯೋಗಸ್ಥನಿಂದ ಲೈಸೆನ್ಸ್ ಪಡೆಯದೆ ಯಾವ ಡಿಸ್ಟ್ರಿಕ್ಟ್ ಜಂಗ್ಲಿಯಲ್ಲಾಗಲಿ ಸಾದೆಯನ್ನ ಕಡಿಯಕೂಡದು, ಯಾ ಯಿದ್ದಲು ಸುಡಕೂಡದು ಯಾ ಯಿವನ್ನ ಸಾಗಿಸಲೂ ಕೂಡದು. ಸಾದೆ ಕಡಿಯುವ ಯಾ ಯಿದ್ದಲು ಸುಡುವವರೆಲ್ಲರೂ, ಲೈಸೆನಿನ ಷರತ್ತುಗಳ ಮೇರಿಗೂ ವ ಫಲಾನೆಬಗೆಯ ಗಿಡಗಳನ್ನ ಫಲಾನೆ ರೀತಿ ಕಡಿದು ಸಾಗಿಸತಕ್ಕದ್ದೆಂಬ ವಿಷಯದಲ್ಲಿ ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್ಲವರ ಮಂಜೂರಾತಿನಿನಿ ಡೆಪ್ಯೂಟಿ ಕಮ್ಮಿಷನರು ವಿಧಿಸುವ ನಿಬಂಧನೆಗಳ ಮೇರಿಗೂ ನಡೆದುಕೊಳ್ಳತಕ್ಕದ್ದು.

3. ಲೈಸೆನ್ಸಿನಲ್ಲಿ ನಮೂದಾವ ವಾಯಿದೆಯೊಳಗಾಗಿ ಲೈಸೆನ್ಸದಾರನು ಸಾದೆಯನ್ನಾಗಲಿ ಇದ್ದಲನ್ನಾಗಲಿ ಸಾಗಿಸಲಿಕ್ಕೆ ತಪ್ಪಿದರೆ ಲೈಸೆನ್ಸ್ ರದ್ದಾಗುವದಲ್ಲದೆ ಲೈಸೆನ್ಸ್ ಫೀ. ವೊಬಲಗು ವಾಪಸ್ ಪಡೆಯಲಿಕ್ಕೆ ಹಕ್ಕುದಾರ ಇರುವದಿಲ್ಲ.

4 ಲೈಸೆನ್ಸಿನಲ್ಲಿ ಕಂಡ ತೇದಾದಲ್ಲವೂ ವೊಟ್ಟಿಗೆ ಒಂದೇ ದಫಾ ಸಾಗಿಸಲ್ಪಡತಕ್ಕದ್ದು.

5. ಲೈಸೆನ್ಸದಾರನು ತನ್ನ ಲೈಸೆನಿನಲ್ಲಿ ನಮೂದಾದ ಜಂಗ್ಲಿಯಲ್ಲಿ ಪೂರಾ ತೇದಾದು ದೊರೆಯಲಿಲ್ಲವೆಂಬ ಕಾರಣದ ಮೇಲೆ ಇತರ ಜಂಗಲಿನಲ್ಲಿ ಸಾದೆ ಕಡಿಯಲಿಕ್ಕೆ ಯಾ ಇದ್ದಲು ಸುಡಲಿಕ್ಕೆ ಹಕ್ಕುದಾರವುಳ್ಳವನಾಗಿರುವದಿಲ್ಲ.

6. ಒಂದು ಲೈಸೆನ್ಸಿನ ಮೇರಿಗೆ ಸಾಗಿಸಲ್ಪಡತಕ್ಕ ಭಂಡೀ ಬೋಜೆಗಳ ಚಡಸಂಖೆ 25 ಇರತಕ್ಕದ್ದು ಮತ್ತು ಬಂಡ್ ಆವ ಜಂಗ್ಲಿಗಾಗಿ ಲೈಸೆನ್ಸ್ ಕೊಡಲ್ಪಡತಕ್ಕದ್ದಲ್ಲವು.

7. ಯಾವದಾದರೊಂದು ಜಂಗ್ಲಿಯನ್ನಾಗಲಿ ಯಾ ಅದರ ಭಾಗಗಳನ್ನಾಗಲಿ ಬಂಡ್ ಮಾಡುವದಕ್ಕೂ ಅಂಥಾ ಜಂಗ್ಲಿಯಲ್ಲಿ ಯಾವ ಸಾದೆಯನ್ನೂ ಕಡಿಯದಂತೆಯೂ ಇದ್ದಲನ್ನ ಸುಡದಂತೆಯೂ ನಿಷೇಧಿಸಲಿಕ್ಕೆ ಡೆಪ್ಯೂಟಿ ಕಮ್ಮಿಷನರು ಅರ್ಹರಾಗಿರತಕ್ಕದ್ದು.

8. ಯಾವ ಮನುಷ್ಯನಾಗಲಿ ಬಂದಾದ ಜಂಗಲಿನಲ್ಲಿ ಸಾದೆ ಕಡದು ಯಾ ಇದ್ದಲು ಸುಡುತ್ತಿದ್ದರೆಯಾಗಲಿ ಅಥವಾ ಸಾದೆ ಯಾ ಇದ್ದಲನ್ನ ಸಾಗಿಸುತ್ತಿದ್ದರೆಯಾಗಲಿ ಅಥವಾ ಮೊಕರರಾದ ಜಂಗ್ಲಿಗಾಗಿ ಕೊಡಲ್ಪಟ್ಟ ಲೈಸೆನ್ಸಿನಲ್ಲಿ ನಮೂದಾದ ಭಂಡೀ ಬೋಜೆಗಳ ಸಂಖೆಗಿಂತಲೂ ಜಾಸ್ತಿಯಾಗಿ ಸಾದೆ ಯಾ ಇದ್ದಲು ಸಾಗಿಸುತ್ತಿದ್ದರೆಯಾಗಲಿ, ಅಥವಾ ವಾಯಿದೆ ಗತಿಸಿಹೋದಂತಾ ಲೈಸೆನ್ಸಿನೊಂದಿಗೆ ಸಾದೆ ಯಾ ಇದ್ದಲನ್ನ ಸಾಗಿಸುತ್ತಿರುವ ಯಾವ ಮನುಷ್ಯನಾಗಲಿ ಲೈಸೆನ್ಸ್ ಇಲ್ಲದೇನೇ ಸಾದೆ ಕಡಿದು ಯಾ ಇದ್ದಲು ಸುಟ್ಟು ಸಾಗಿಸುವ ಮನುಷ್ಯನಂತೆಯೇ ಯಿಣಿಸಲ್ಪಡತಕ್ಕದ್ದು.

9. ವಾಸ್ತವ್ಯವಾಗಿ ಸಾಗುವಳೀದಾರ ರೈತರ ಸ್ವಂತ ಉಪಯೋಗಕ್ಕಾಗಿಯೇ ಪ್ರತ್ಯೇಕಿಸಲ್ಪಟ್ಟ ಜಂಗಲ್ ಪ್ರದೇಶಗಳಲ್ಲಿ ಸಾದೆ ಕಡಿದು ಸಾಗಿಸತಕ್ಕ ಬಗ್ಯಾಗಲಿ ಯಾ ಇದ್ದಲು ಸುಟ್ಟು ಸಾಗಿಸತಕ್ಕ ಬಗ್ಯಾಗಲಿ ತೀರ್ವೆ ತೀರಿಸುವ ಲೈಸೆನ್ಸ್ ಕೊಡಲ್ಪಡತಕ್ಕದ್ದಲ್ಲವು.

10. ತೀರ್ವೆ ಮೊಕರರಾತೀ ವಿಷಯದಲ್ಲಿ ಮೇಲ್ಕಂಡ ನಿಬಂಧನೆಗಳು ಕಂದಾಯ ತೆರುವ ರೈತರು, ವ ಮೊಹತರ್ಫಾ ತೆರುವಂಥಾ ಕಬ್ಬಿಣ ಕರಗಿಸುವವರು ವ ಲೋಹಾರರು ಇವರುಗಳಿಗೆ ಪಾಲೀ ಜಾರೀ ಇರುವ ಹಕ್ಕು ಅಂದರೆ ಸಾದೆ ಯಾ ಇದ್ದಲನ್ನ ವಾಸ್ತವ್ಯವಾಗಿ ಸ್ವಂತ ಉಪಯೋಗಕ್ಕೋಸ್ಕರ ಮುಖತ್ತಾಗಿ ಪಡೆಯುವ ಸ್ವಾತಂತ್ರ್ಯವನ್ನ ಬಾಧಕ ಪಡಿಸುವದಿಲ್ಲವು. ಅಂಥಾ ಜನರೂ (ಅತಿಕ್ರಮಿಸಿ ನಡೆವಲ್ಲಿ ಹಕ್ಕು ಬಿಟ್ಟೀ ಕಳೆದುಕೊಳ್ಳುವ ರೈತರುಗಳ ವಿನಾ) ಸಾದೆ ಕಡಿಯಲಿಕ್ಕೆ ಮಾಫೀ ಲೈಸೆನ್ಸ್ ಪಡೆಯಲು ಬದ್ಧರಾಗಿರುವದಲ್ಲದೆ ಅಂಥಾ ಲೈಸೆನ್ಸಗಳ ಷರತ್ ಬಂದೀ ಮೇರಿಗೆ ನಡೆದುಕೊಳ್ಳತಕ್ಕದ್ದು. ಮುಖತ್ತಾಗಿ ಪಡೆದುಕೊಂಡ ಸಾದೆಯಾಗಲಿ ಇದ್ದಲಾಗಲಿ ಮಾರಲ್ಪಡಕೂಡದು. ಯಾ ಮತ್ತೊಂದು ಪದಾರ್ಥಕ್ಕೆ ಬದಲಿಯಾಗಿ ಕೊಡಲ್ಪಡಕೂಡದು ಅಥವಾ ವ್ಯಾಪಾರದ ಬಗ್ಯಾಗಿ ಮತ್ಯಾವ ರೀತಿಯಿಂದಲೂ ಉಪಯೋಗಿಸಲ್ಪಡಕೂಡದು.

11. ಈ ಕೆಳಗೆ ನಮೂದಾಗುವ ಗಿಡಗಳು ಸಾದೇ ಬ್ಯೆ ಕಡಿಯಲೂ ಕೂಡದು ಯಾ ಯಿದ್ದಲಿಗಾಗಿ ಸುಡಲೂ ಕೂಡದು ಅವು ಯಾವವೆಂದರೆ.

ಮನ್ನಾ ಜಾತಿ ಗಿಡಗಳು.

ಸಂದಲೆ, ತೇಗ, ಹುವೆ, ಕರೀಮರ, ಹೊನ್ನೆ, ಜಾಲಾರಿ, ನಂದಿ, ಹೆಬ್ಬಲಸು, ಕಾರಾಚಿ, ಬಿಳೀಮತ್ತಿ ವ ಕರೀಮತ್ತಿ.

ಉಳಿಸಿಕೊಳ್ಳಲ್ಪಡದ ಜಾತಿಗಳು.

ಹುಣಾಲ್, ಮಾವಿ, ಯತ್ತಿಗ, ಜಂಬು, ಬಿಲ್ವಾರ, ತಡಸಲು, ಮಾವು, ಹುಣಸೆ, ಕೆಂದ್ಹಾಲ, ನೇರಳೆ, ಬಾಗಿ, ಬೋಗಿ, ಹಲಗ, ಭಾರಂಗಿ, ಸಂಪಿಗೆ, ನಂಜೆ, ಗೆಂಡಿ, ಹಲಸು, ಕುಲ್ಲುಗರಿಗೆ, ಗೆಂಡಗರಿಗೆ, ನಾಟೆ, ಅಳಲೇಕಾಯಿ, ದಾಳಚಿನ್ನಿ, ಕಾಣು, ಗೇರು, ಗಾಂಬೋಜಿಬನ್ನಿ, ಕುಲ್ಲುಬಾಗೆ, ಬೇವು, ನಾಯಿದೇಲಾ, ಕಗ್ಗಲಿ ವ ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್‌ಯವರಿಂದ ನಿಷೇಧಿಸಲ್ಪಟ್ಟು ಗೆಜೆಟ್ಟಿನಲ್ಲಿ ಫಾಯಿಷ್ ಮಾಡೋಣಾಗುವಂತಾ ಇತರ ಜಾತಿ ಮರಗಳು.

12. ಸ್ವಂತ ಯಾ ಇನಾಂ ಜಮಿನಿನಲ್ಲಿ ಕಡಿಯಲ್ಪಟ್ಟು ವ್ಯಾಪಾರ ಯಾ ಮತ್ಯಾವ ಬಗ್ಯಾಗಲಿ ಸಾಗಿಸಲ್ಪಡುವಂತಾ ತಮ್ಮಾ ಸಾದೆ ಯಾ ಸುಡಲ್ಪಟ್ಟು ಸಾಗಿಸಲ್ಪಡುವಂಥಾ ಇದ್ದಲಿಗಾಗಿ ಮತ್ತು ಹರ್‌ಮೇಜಸ್ಟೀಸ್ ಕೇಮೆಯಿಂದ ಬರುವಂತಾ ಯಲ್ಲ ಸಾದೆ ಯಾ ಇದ್ದಲಿಗಾಗಿ ಅಮಲ್‌ದಾರ್‌ಗಿಂದಾಗಲಿ, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಿಂದಾಗಲಿ, ಯಾ ಆ ಬ್ಯೆ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರಿಂದ ಕ್ರಮವಾಗಿ ಅಧಿಕಾರ ಹೊಂದಿದಂತಾ ಇತರ ಸರ್ಕಾರ್ ಉದ್ಯೋಗಸ್ಥನಿಂದಲಾಗಲಿ ಮಾಫೀ ಲೈಸೆನ್ಸನ್ನ ಪಡೆಯತಕ್ಕದ್ದು. ಆ ಮೇರಿಗೆ ಲೈಸೆನ್ಸಿನೀ ಸಾಗಿಸಲ್ಪಡುವ ಸಾದೆ ಯಾ ಇದ್ದಲಿಗಾಗಿ ಸದರೀ ವಿಧಿಸೋಣಾದ ತೀರ್ವೆ ಮೊಫ್ ಮಾಡಲ್ಪಡುವದು.

13. ಲೈಸೆನ್ಸ್ ಯಿಲ್ಲದೆ ಯಿರುವಂಥಾ ಸಾದೆ ಯಾ ಯಿದ್ದಲು ಯಾವ ಸ್ಥಳಕ್ಕೆ ಸಾಗಿಸಲ್ಪಡುತ್ತೋ ಆ ಸ್ಥಳಕ್ಕೆ ಕೇರುವಾಗ ಭಂಡಿಗಳ ಸಂಖೆಯಮೇಲೆ ತೀರ್ವೆ ತೆರಲಿಕ್ಕೆ ಗುರಿಯಾಗಿರತಕ್ಕದ್ದಲ್ಲದೆ ಅಂಥಾ ತೀರ್ವೆಯು, ತಾಲ್ಲೂಕಿನವರಿಂದಲಾಗಲಿ, ಡೆಪ್ಯೂಟಿ ಕಮ್ಮಿಷನರವರು ಮೊಕರರ್ ಮಾಡುವಂಥಾ ಇತರರಿಂದಲಾಗಲಿ, ವಸೂಲ್ ಮಾಡಲ್ಪಡತಕ್ಕದ್ದು ಮತ್ತು ವಿಧಿಸೋಣಾದ ನಮೂನೆಯಲ್ಲಿ ಪೊಂದು ಅಚ್ಚು ಹಾಕಿದ ಪ್ಯಾಸ್ ಕೊಡಲ್ಪಡತಕ್ಕದ್ದು.

14. ಬೆಂಗಳೂರು ಷಹರ್ ಆಫವಾ ಕಿವಿಲ್ ವ ಮಿಲಟರಿ ಸ್ಟೇಷನಿನೊಳಿಗೆ ಕರೆಗಪಡಿ ಯಾ ಪುಗಯೋಗಕ್ಕಾಗಿ ಲೈಸೆನ್ಸಿಗಳ ಮೇರಿಗೆ ಸಾದೆ ಅಥವಾ ಇದ್ದಲು ತರುವಂತಾ ದರೋಬಸ್ತು ಜನಗಳು ಅಂತಾ ಲೈಸೆನ್ಸಿಗಳನ್ನ ಷಹರ್ ಯಾ ಸಿವಿಲ್ ವ ಮಿಲಟರಿ ಸ್ಟೇಷನ್ ಇವುಗಳ ಬಳಿಯಣ ಉಕ್ತ ಡದಲ್ಲಿರುವ ಫಾರೆಸ್ಟ್ ಉದ್ಯೋಗಸ್ಥರ ವಶಕ್ಕೆ ಪೋಸ್ಟಸತಕ್ಕದ್ದು. ಅವರು ಲೈಸೆನ್ಸ್ ಮೇರಿಗೆ ತೇದಾದನ್ನ ಆಜಮಾಯಿಷಿ ಮಾಡಿ, ಆಜಮಾಯಿಷಿ ಯಾವ ಬಗೆಯಲ್ಲಿ ಮಾಡಲ್ಪಟ್ಟಿತ್ತೋ ಅದು, ತಾರೀಖು ವ ಆಜಮಾಯಿಷಿ ಮಾಡಿದವನ ರುಜಾನಿ ಪ್ರತಿ ಲೈಸೆನ್ಸ್ ಮೇಲೂ ಷರಾ ನಮೂದಿಸತಕ್ಕದ್ದು ಇಂತಾ ಲೈಸೆನ್ಸಿಗಳು ಬಾಗಲುಗಳ ಬಳಿ ವಸೂಲು ಮಾಡಲ್ಪಟ್ಟು ಆ ಪೈಕಿ ಫಾರೆಸ್ಟ್ ಆಫೀಸರುಗಳಿಂದ ಕೊಡಲ್ಪಟ್ಟಿಂಥಾವುಗಳನ್ನ ಫಾರೆಸ್ಟ್ ಆಫೀಸರರ ಬಳಿಗೂ, ಇತರ ಲೈಸೆನ್ಸಿಗಳನ್ನ ಆಯಾ ಅಮಲ್‌ದಾರರುಗಳ ಬಳಿಗೂ ವಾಪಸ್ ಕಳುಹಿಸಲ್ಪಡತಕ್ಕದ್ದು. ಇವು ಆಫೀಸ್ ಪ್ರತಿಗಳಿಂದಿಗೆ ಚೆಕಟೂಯಿಸಲ್ಪಡತಕ್ಕದ್ದು.

ತಾರೀಖು 12ನೇ ಜೂ 1889.

ಕ್ಯಾಂಪ್ ನಂ. 165.—(1888ನೇ ಇಸವಿ IIIನೇ ನಂಬರ್ ರೆಗ್ಯುಲೇಷನ್) ಯಂಬ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿನ 240ನೇ ಸೆಕ್ಷನಿನ ನಿಯಮಗಳನುಸರಿಸಿ ವಸೂಲ್ಮಾಡಲ್ಪಡಬೇಕಾದ ಇದರಡಿಕಂಡ ಲೈಸೆನ್ಸು ಫೀ ಪಟ್ಟಿಯು ಮೈಸೂರು ಪಟ್ಟಣದಲ್ಲಿ ಜಾರೀಮಾಡಲ್ಪಡತಕ್ಕ ಬಗ್ಗೆ ಶ್ರೀಮನ್ ಮಹಾರಾಜ ರಜಾನಾಜಿಬ್ ಬಹದ್ದೂರವರ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೆಬಗ್ಯಾಗಿ ಇದರ ದೆಕೆಯಿಂದ ಘೋಷಿಸ್ ಮಾಡಲ್ಪಡುತ್ತೆ:—

ನಂಬರ್.	ಲೈಸೆನ್ಸಿಗೆ ಒಳಪಟ್ಟ ಖಾಬುಗಳು.	ರೆಗ್ಯುಲೇಷನಿನ ಯಾ ಬೈಲಾಗಳ ಯಾ ಸೆಕ್ಷನ್ ನಂಬರ್.	ಮಂಜೂರ್ಮಾಡಲ್ಪಟ್ಟ ಲೈಸೆನ್ಸ್ ಫೀ ದರ.
1	ಬಿಸಲುಚಪ್ಪರಗಳನ್ನ ಹಾಕುವಬಗ್ಯಾದ ಅಪ್ಪಣೆಯಾ ಲೈಸೆನ್ಸು ಬಗ್ಯೆ ..	128	ಬಿಸಲು ಚಪ್ಪರ ಒಂದಕ್ಕೆ ಒಂದು ರೂಪಾಯಿನಂತೆ
2	ಬಾಡಿಗೆ ಕುದುರೆ ಯಾ ಬಂಡಿ ತಬೇಲೆ ಯಿಡುವ ಬಗ್ಯೆ ಲೈಸೆನ್ಸು. ..	137	ತಬೇಲೆ ವಂದಕ್ಕೆ ಸಾಲಿಯಾನಾ 2 ರೂಪಾಯಿ ಪ್ರಕಾರ
3	ಭಂಡೀನೋಟಿನ ಬಗ್ಯೆ ಡಿಟೋ ..	137	ಪ್ರತಿ 200 ಚದರಗಜ ಯಾ ಆದಕ್ಕೆ ಕಮ್ಮಿಯಿರುವ ವಿಸ್ತೀರ್ಣಕ್ಕೆ ಸಾಲಿಯಾನಾ ವಂದು ರೂಪಾಯಿ ಪ್ರಕಾರ
4	10 ದನಗಗಿಂತ ಜಾಸ್ತಿಯಾಗಿ ದನಗಳನ್ನುಳ್ಳ ಕೊಟ್ಟಿಗೆ ಬಗ್ಯೆ ಡಿಟೋ ..	137	ಹತ್ತು ದನಗಳಿಗಿಂತ ಜಾಸ್ತಿಯಾಗಿರುವ ಪ್ರತಿ ದನಕ್ಕೂ ಸಾಲಿಯಾನಾ ಯೆಂಟಾಣೆ ಪ್ರಕಾರ
5	20 ಯಾ ಹೆಚ್ಚು ಸಂಖೆವುಳ್ಳ ಕುರಿ ಯಾ ಮೇಕೆಗಳನ್ನಿಡುವ ಬಗ್ಯೆ ಡಿಟೋ ..	137	20ಕ್ಕಿಂತಲೂ ಜಾಸ್ತಿಯಾದ ಪ್ರತಿ ಕುರಿ ಯಾ ಮೇಕೆಗೆ ಸಾಲಿಯಾನಾ ಯರಡಾಣೆ ಪ್ರಕಾರ
6	ಯಿಟ್ಟಿಗೆ ಗೂಡಿನ ಬಗ್ಯೆ ಲೈಸೆನ್ಸ ..	185	ವಂದು ಲಕ್ಷ ಯಾ ಅದಕ್ಕೆ ಕಮ್ಮಿಸಂಖೆಯುಳ್ಳ ಯಿಟ್ಟಿಗೆ ಯಿರತಕ್ಕ ಪ್ರತಿ ಗೂಡಿಗೂ 5 ರೂಪಾಯಿ ಪ್ರಕಾರ
7	ತಾರಸು ಯಿಟ್ಟಿಗೆ ಸುಡುವ ಬಗ್ಯೆ ಲೈಸೆನ್ಸು ..	185	ವಂದು ಲಕ್ಷ ಯಾ ಅದಕ್ಕೆ ಕಮ್ಮಿಸಂಖೆಯುಳ್ಳಯಿಟ್ಟಿಗೆ ಗೂಡು ವಂದಕ್ಕೆ ಯರಡು ರೂಪಾಯಿ ಪ್ರಕಾರ
8	ಗಡಿಗೆ, ಉರಟುಹಂಚು ಮತ್ತು ಚದರಹಂಚು ಯಿವುಗಳನ್ನ ಸುಡುವ ಕುಂಬಾರ ಸೂಳು ಬಗ್ಯಾಗಿ ಲೈಸೆನ್ಸ ..	185	ಪ್ರತಿಸೂಳಗೂ ಸಾಲಿಯಾನಾ 2 ರೂಪಾಯಿ ಪ್ರಕಾರ
9	ಸಾಡೆ ಡಿಪೊಬಗ್ಯೆ ಲೈಸೆನ್ಸ ..	185	ಡಿಪೋ ವಂದಕ್ಕೆ ಮೂರು ರೂಪಾಯಿ ಪ್ರಕಾರ
10	ನಾಟಾ ಡಿಪೊಬಗ್ಯೆ ಡಿಟೋ ..	185	ಡಿಪೋ ವಂದಕ್ಕೆ ಆರು ರೂಪಾಯಿ ಪ್ರಕಾರ
11	ಇತರ ಯಾವದಾದರೂ ಟಿಲ್ಲರೆ ಲೈಸೆನ್ಸ ..	185	ಲೈಸೆನ್ಸು ವಂದಕ್ಕೆ ಯಂಟಾಣೆ ನೇರೆ

ತಾರೀಖು 10ನೇ ಮೇ 1889.

ನಂ. 35.—ಹಿಡುವಳಿಯಲ್ಲಿ ಯಿಲ್ಲದ ಸರಕಾರಿ ಜಮೀನಿನಲ್ಲಿಯೂ, ಸರ್ಕಾರಿ ಜಂಗ್ಲಿಗಳಲ್ಲಿಯೂ, ವ ಘೋರೆಸ್ಟುಗಳಲ್ಲಿಯೂ ಯಿರುವಂತಾ ಈಚಲು ಮರಗಳಿಂದ ಗರಿಗಳನ್ನು ಕತ್ತರಿಸಿ ಸಾಗಿಸತಕ್ಕ ಬಗ್ಯಾಗಿ ಏರ್ಪಡಿಸಿರುವ ನಿಬಂಧನೆಗಳನ್ನ ಶ್ರೀಮನ್ ಮಹಾರಾಜಾ ಸರ್ಕಾರದವರು ಮಂಜೂರ್ಮಾಡಿರುತ್ತಾರೆ.

I. ಕೇಂದಿ ಇಜಾರೆದಾರರು ಕೇಂದಿ ಯಿಳಿಸತಕ್ಕ ಬಗ್ಯೆ ಕತ್ತರಿಸಬಹುದಾದ ಗರಿಗಳ ವಿನಾ, ಯಾವ ಗರಿಗಳನ್ನಾಗಲಿ ಕತ್ತರಿಸಿ ಉಪಯೋಗಿಸಿಕೊಳ್ಳತಕ್ಕ ವಿಷಯದಲ್ಲಿ ನಿಬೇಧಿಸಲ್ಪಟ್ಟಿರುತ್ತಾರೆ.

II. (*a*) ಕಸಬ್ದಾರ್ರಾಗಿ ಹಗ್ಗಾ ಹೊಸೆಯುವವರು, ಬುಟ್ಟಿ ಹೆಣೆಯುವವರು ಚಾವೆ ಹೆಣೆಯುವವರು ಯಿವರುಗಳಲ್ಲದ ಚಿರಾಯುತ ಮಾಡುವ ರೈತರುಗಳು ಹಗ್ಗವಮಾಡಿಕೊಳ್ಳಲಿಕ್ಕಾಗಲಿ ಯಾ ಇತರ ವಾಸ್ತವ್ಯವಾದ ಚಿರಾಯತ ಕೆಲಸಕ್ಕಾಗಲಿ ಗರಿಗಳನ್ನ ಮುಫತ್ತಾಗಿ ಉಪಯೋಗಿಸಿಕೊಳ್ಳಬಹುದು.

(*b*) ಡಿಪ್ಯುಟಿ ಕಮ್ಮಿಷನರು ಮೊಕರರ್ ಮಾಡುವ ಸ್ಥಳಗಳಲ್ಲಿ ಮೊಹತರ್ಫಾ ತೆರುವಂತಾ ಕಾಟೇಜೆಲ್ಲ ತಯಾರ್ಮಾಡುವವರು ಸಾಮೆ ಬಗ್ಯಾಗಿ ನೋಣಿಗಿದ ಈಚಲು ಗರಿಗಳನ್ನ ಮುಫತ್ತಾಗಿ ಸಾಗಿಸಬಹುದು. ಸರ್ಕಾರದ ಕೇಂದಿ ಇಜಾರದಾರನ ಕೆಲಸಕ್ಕೆ ಅನುಕೂಲಪಡಿಸಿಕೊಟ್ಟು ಡಿಪ್ಯುಟಿ ಕಮ್ಮಿಷನರವರು ಆಗಿಂದಾಗ್ಯೆ ಹೆಸರುನಿಶಿ ಗೊತ್ತುಮಾಡುವಂತಾ ವನಗಳಿಂದಲೇ ಗರಿಗಳನ್ನ ಸಾಗಿಸಬೇಕು.

(*c*) ಈ ನಿಬಂಧನೆಯಲ್ಲಿ ಹೇಳೋಣಾದ ಉದ್ದೇಶಗಳಾಗಿ ಅನುಲೆದಾರ್ರಿಂದಾಗಲಿ ಯಾ ಈಬಗ್ಯೆ ಡಿಪ್ಯುಟಿ ಕಮ್ಮಿಷನರವರಿಂದ ಅಧಿಕಾರ ಕೊಡಲ್ಪಟ್ಟಿಂತಾ ಇತರ ಆಫಿಸರರಿಂದಾಗಲಿ ಬಗೆ ಲಾಗವಡಿ ಲೈಸೆನ್ಸು ಪಡೆದ ಹೊರ್ತು ಯಾವ ಗರಿಯಾಗಲಿ ಕತ್ತರಿಸಲ್ಪಡಕೂಡದು.

III. ಕಸಬ್‌ದಾರ್‌ನ ಹಗ್ಗ ಹೊಸೆಯುವವರು, ಬುಟ್ಟಿ ಹೆಣೆಯುವವರು, ಚಾಪೆ ಹೆಣೆಯುವವರು ಮತ್ತು ಇತರರು, ಇದರ ಡಿಕಂಡ ದರಗಳಮೇರಿಗೆ ರುಸುಂ ಪಾವತೀಮಾಡಿ ಈಚಲು ಗರಿಗಳ ಬಗ್ಯಾಗಿ ಲೈಸೆನ್ಸ್ ಪಡೆದುಕೊಳ್ಳತಕ್ಕದ್ದು.

ಆರು ತಿಂಗಳು ಅಥವಾ ಕಮ್ಮಿಕಾಲಕ್ಕೆ .. .. ರೂ. 2

ಆರು ತಿಂಗಳಿಗೆ ಜಾಸ್ತಿಕಾಲ ಅಥವಾ ಪೂರಾ ಸಾಲಿಗೆ .. .. ರೂ 4

IV. IIIನೇ ಕಲಮಿನಲ್ಲಿ ನಮೂದಾದ ರುಸುಂ ವೊಬಲಗನ್ನ ಅಮಲ್‌ದಾರ್‌ಗಾಗಲಿ ಯಾ ಆಬ್ಗ್ಯೆ ಡೆಪ್ಯುಟಿ ಕಮ್ಮಿಷನರವರಿಂದ ಅಧಿಕಾರ ಕೊಡಲ್ಪಟ್ಟಿಂತಾ ಇತರ ಆಫಿಸರಿಗಾಗಲಿ ಪಾವತಿಮಾಡಿ ಅವರಿಂದ ಲೈಸೆನನ್ನ ಪಡೆಯತಕ್ಕದ್ದು, ಪರಂತು ಲೈಸೆನ್ಸ್ ಬಗ್ಯಾಗಿ ದರಖಾಸ್ತುಗಳನ್ನ ರೂಬರೂಬ್ ಅಮಲ್‌ದಾರ್‌ಗಾಗಲಿ ಅಥವಾ ಗ್ರಾಮದ ಪಟೇಲ್ ಯಾ ಹೋಬಳಿ ಕೇಳದಾರನ ವೂರೀಫತಾಗಲಿ ಮಾಡಬಹುದು.

V. ರೂಲ್ಸಿನ II ವ IIIನೇ ಕಲಂಗಳಲ್ಲಿ ನಮೂದಾದ ಲೈಸೆನ್ಸಗಳಲ್ಲಿ ಅಂತಾ ಲೈಸೆನ್ಸಗಳ ವಾಯಿದೇಯೊಳಗಾಗಿ ಸಾಗಿಸಲಿಕ್ಕೆ ಅಪ್ಪಣೆ ಕೊಡಲ್ಪಟ್ಟ ತಲೆಬೋಜೆ ಯಾ ಭಂಡೀಬೋಜೆಗಳ ಸಂಖೆ ನಮೂದಿಸಿರತಕ್ಕದ್ದು, ಮತ್ತು ಪ್ರತಿ ಸಂಗತಿಯಲ್ಲೂ ಆವಶ್ಯಕತೆಯನ್ನನುಸರಿಸಿ, ಪ್ರತಿ ಲೈಸೆನಿನಲೂ ನಮೂದಿಸಬೇಕಾದ ತಲೆಬೋಜೆ ಯಾ ಭಂಡಿಬೋಜೆಗಳ ಸಂಖೆ ವೊಕರರ್ಯಾಡುವ ವಿಷಯದಲ್ಲಿ, ಲೈಸೆನ್ಸ್ ಕೊಡುವಂತಾ ಆಫಿಸರು ಯುಕ್ತಾನುಸಾರ ನಡಿಸತಕ್ಕದ್ದು.

VI. ರೂಲ್ಸಿನ II ವ IIIನೇ ಕಲಂಗಳಲ್ಲಿ ನಮೂದಾಗುವ ಲೈಸೆನ್ಸಗಳು ಈ ನಿಬಂಧನೆಗಳಿಗೆ ಲಗತ್ತಾಯಿರುವ ನಮೂನೆಗಳಲ್ಲಿರತಕ್ಕದ್ದು. ಅಪ್ರಾ ವರ್ಗಮೂಲಕ ಪರಭಾರೆಯಾಗತಕ್ಕದ್ದಲ್ಲವು, ಮತ್ತು ಲೈಸೆನ್ಸದಾರ ಯಾ ಆವನ ವಾಸ್ತವ್ಯವಾದ ನೌಕರ, ಯಾ ಆವನ ಕುಟುಂಬಕ್ಕೆ ಕೀರಿದವನಾಗಿ ನ್ಯೂಟ್ಟಗೆ ಯಿರುವಂತಾ ಮನುಷ್ಯನ ವಿನಾ ಬೇರೆಯಾವ ಮನುಷ್ಯನೇ ಆಗಲಿ ಅಂತಾ ಲೈಸೆನ್ಸ ಮೇರಿಗೆ ಈಚಲು ಗರಿಯನ್ನು ಕತ್ತರಿಸಕೂಡದು. ಯಾವ ಪಟೇಲನಾಗಲಿ ಕೇಳದಾರನಾಗಲಿ ಪೋಲೀಸ್ ಆಫಿಸರಾಗಲಿ ಕೇಳಿದಾಗ ತನ ಖಿ ಬಗ್ಯೆ ಲೈಸೆನ್ಸಗಳು ಹಾಜರಿ ಮಾಡಲ್ಪಡತಕ್ಕದ್ದು. ಮತ್ತು ಅವುಗಳಲ್ಲಿ ಕಂಡ ವಾಯಿದೆ ಪೂರೈಸಿದ ಕೂಡ್ಲೆ ಲೈಸೆನ್ಸ ಅಮಲ್‌ದಾರ್‌ಗೆ ವಾಪಸ್ ರವಾನೆ ಮಾಡಲ್ಪಡತಕ್ಕದ್ದು.

VII. ಈಚಲು ಗರಿಗಳನ್ನ ಕತ್ತರಿಸುವದರಲ್ಲಿ ಇದರಡಿಕಂಡ ನಿಬಂಧನೆಗಳನ್ನ ಅನುಸರಿಸತಕ್ಕದ್ದು ಅವು ಯಾವವೆಂದರೆ:—

(a) ಯಾವ ಗಿಡಗಳಿಂದ ಕೀಂದಿ ಯಿಳಿಸಲ್ಪಡುತ್ತೋ ಅಂತಾ ಗಿಡಗಳಲ್ಲಿ ಗರಿಯನ್ನ ಕತ್ತರಿಸಕೂಡದು.

(b) ಈಚಲು ಗಿಡಗಳು ಚಿಕ್ಕವಾಗಿಯೂ ಯಳೆದಾಗಿಯೂ ಯಿದ್ದು, ಅಂತಾ ಗಿಡಗಳ ದಿಂಡು ಭೂಮಿಯ ಮಟ್ಟದಿಂದ ಗಂಯ ಬುಡದವರವಿಗೂ ವೊಂದುಗೆಜದ ಯತ್ತರದೊಳಗಾಗಿಯೇ ಯಿದ್ದಲ್ಲಿ ಅಂತಾ ಗಿಡಗಳ ಗರಿಯನ್ನ ಕತ್ತರಿಸಕೂಡದು.

(c) ಲೈಸೆನ್ಸದಾರನು ತನ್ನ ಲೈಸೆನಿನಲ್ಲಿ ನಮೂದಾಗಿರುವಂಥಾ ವನದ ಗಿಡಗಳಲ್ಲಿ ಗರಿ ಕತ್ತರಿಸಜೇಕಾದ್ದೇ ಹೊರ್ತು ಇತರ ಯಾವ ಗಿಡದ ಗರಿಯನ್ನೂ ಕತ್ತರಿಸಕೂಡದು.

VIII. ಈ ನಿಬಂಧನೆಗಳಿಗಾಗಲಿ, ಲೈಸೆನಿನಲ್ಲಿ ಕಂಡ ಯಾವ ಷರತ್ತುಗಳಿಗಾಗಲಿ ಬರಕಿಲಾಫಾಗಿ ನಡಿದಲ್ಲಿ ಅಂತಾ ಲೈಸೆನ್ಸದಾರನು ತನ್ನ ಲೈಸೆನ್ಸನ್ನ ದಂಡವಾಗಿ ವೊಪ್ಪಿಸಲಿಕ್ಕೆ ಗುರಿಯಾಗುವದಲ್ಲದೆ, ಕ್ರಮವಾದ ವಿಚಾರಣೆಯಲ್ಲಿ ಅಮಲ್‌ದಾರ್‌ಗೆ ಯುಕ್ತತೋರಿದಂತೆ 50 ರೂಪಾಯಿಗಳಿಗೆ ಅತಿಕ್ರಮಿಸದ ಜುರ್ಮಾನೆ ತೆರಲಿಕ್ಕೆ ಸಹ ಗುರಿಯಾಗಿರತಕ್ಕದ್ದು.

IX. ಈ ಮೇಲ್ಕಂಡ ನಿಬಂಧನೆಗಳು ಹಿಡುವಳಿಯಲ್ಲಿಲ್ಲದ ಸರ್ಕಾರಿ ಜಮೀನ್‌ಗಳಲ್ಲಿ ವ ಜಂಗಲ್‌ಗಳಲ್ಲಿರುವಂತಾ ಈಚಲುವನಗಳಿಗೆ ಮಾತ್ರ ಲಾಗಾವಾಗಿರುತ್ತವೆ, ಆದರೆ "ಕಿರ" ಅಥವಾ "ಹುಲ್ಲೀಚಲು" ಗಿಡಗಳಿಂದ ಗರಿಗಳನ್ನ ತೆಗದು ಸಾಗಿಸುವದಕ್ಕಾಗಲಿ, ಅಥವಾ ಇನಾಂಗ್ರಾಮಗಳಲ್ಲಿ ಯಾ ಸರ್ಕಾರಕ್ಕೆ ಕಂದಾಯ ತೆರುವಂತಾ ಹಿಡುವಳಿ ಜಮೀನ್‌ಗಳಲ್ಲಿರುವ ಗಿಡಗಳಿಂದ ಗರಿ ತೆಗದು ಸಾಗಿಸುವದಕ್ಕಾಗಲಿ ಲಾಗಾವಾಗುವದಿಲ್ಲವು.

X. ಡೆಪ್ಯುಟಿ ಕಮ್ಮಿಷನರವರು, IIIನೇ ನಿಬಂಧನೆ ಮೇರಿಗೆ ವಸೂಲಾಗತಕ್ಕ ರುಸುಂ ಹುಟ್ಟುವಳಿಯನ್ನ, ಶ್ರೀಮನ್ಮಹಾರಾಜಾ ಸರ್ಕಾರದವರ ಸಾಧಾರಣ ಯಾ ವಿಶೇಷ ಮಂಜೂರಾತಿ ಮೇಲೆ ಗುತ್ತಿಗ್ಗೆ ಕೊಡಬಹುದು. ಫೀಜು ಹುಟ್ಟುವಳಿಯನ್ನ ಹಾಗೆ ಗುತ್ತಿಗ್ಗೆ ಕೊಟ್ಟಾಗ, ಡೆಪ್ಯುಟಿ ಕಮ್ಮಿಷನರವರು (ಈ ನಿಬಂಧನೆಗಳಿಗೆ ಅನುಗುಣವಿಲ್ಲದಂತೆ) ಆಗಿಂದಾಗ್ಯೆ ವಿಧಿಸಬಹುದಾದ ನಿಯಮಗಳು ಯಾ ನಿರ್ಬಂಧಗಳಿಗೊಳಪಟ್ಟು, ಕಸಬ್‌ದಾರ್‌ನ ಹಗ್ಗ ಹೊಸೆಯುವವರು ಬುಟ್ಟಿ ಮಾಡುವವರು, ಚಾಪೆಹೆಣಿಯುವವರು ವ ಇತರರು ಈಚಲು ಗರಿಗಳನ್ನ ಸಾಗಿಸುವ ಬಗ್ಯೆ IIIನೇ ರೂಲ್ಸ ಅನುಸರಿಸಿ ಲೈಸೆನ್ಸಗಳನ್ನ ಕೊಡಲಿಕ್ಕೆ ಗುತ್ತಿಗೆದಾರನು ಅಧಿಕಾರವುಳ್ಳವನಾಗಿರತಕ್ಕದ್ದು ಮತ್ತು ಗುತ್ತಿಗೆದಾರನು, ತಾನು ಕೊಟ್ಟಿಂತಾ ಯಲ್ಲಾ ಲೈಸೆನ್ಸಗಳ ಪಟ್ಟಿಯನ್ನ ಪ್ರತಿ ೩ ಮಾಹೆ ಅಯ್ಕೆರನಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ವಿಧಿಸೋಣಾಗುವ ನಮೂನೆದಲ್ಲಿ ಬಂದು ಪಟ್ಟಿಯನ್ನ ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಹಾಜರ್ಯಾಡತಕ್ಕದ್ದು. ಗುತ್ತಿಗೆದಾರನಿಂದ ಕೊಡೋಣಾದ ಲೈಸೆನ್ಸಗಳ ವಿಷಯದಲ್ಲೂ ಮೇಲೆ ಹೇಳೋಣಾದ ನಿಬಂಧನೆಗಳು ಲಗಾವಾಗತಕ್ಕದ್ದು.

XI. ಡೆಪ್ಯುಟಿ ಕಮ್ಮಿಷನರವರು, ಇಬರ ಹಿಂದಿನ ಕಲಮನ್ನನುಸರಿಸಿ ಕೊಡೋಣಾಗಿದ್ದ ಯಾವ ಇಜಾರೆಯನ್ನಾಗಲಿ, ಶ್ರೀಮನ್ಮಹಾರಾಜಾ ಸರ್ಕಾರದವರ ಮಂಜೂರಾತಿಯನ್ನ ಪಡೆದು, ರದ್ದುಪಡಿಸಬಹುದು.

ಈಚಲುಗರಿಯನ್ನು ಕತ್ತರಿಸಿ ಸಾಗಿಸುವ ಬಗ್ಯೆ ಮೊಫೀ ಲೈಸೆನ್ಸ.

1. ತಾಲ್ಲೂಕು
2. ಗ್ರಾಮ
3. ಲೈಸೆನ್ಸ ನಂಬರು
4. ಲೈಸೆನ್ಸದಾರನ ಹೆಸರು ಮತ್ತು ವಾಸಸ್ಥಳ ವಗೈರೆ
5. ಲೈಸೆನ್ಸದಾರನ ಕಸಬು
6. ಲೈಸೆನ್ಸಿನಲ್ಲಿ ದಾಖಲಾದ ತೇದಾದು
7. ಯಾವ ವನಗಳಲ್ಲಿ ಈಚಲುಗರಿ ಕಡಿಯತಕ್ಕದ್ದು
8. ಯಾವಬಗ್ಯಾಗಿ ಈಚಲುಗರಿ ಬೇಕಾಗಿರುತ್ತೆ
9. ಲೈಸೆನ್ಸ ವಾಪಸು ಮಾಡಬೇಕಾದ ವಾಯಿದೆ
10. ತಾರೀಖು

ಲೈಸೆನ್ಸ ಕೊಡುವ ಆಫೀಸರ ರುಜು ವ ಹುದ್ದೆ.

ಈಚಲುಗರಿಯನ್ನು ಕತ್ತರಿಸಿ ಸಾಗಿಸುವ ಬಗ್ಯೆ ಮೊಫೀ ಲೈಸೆನ್ಸ.

1. ತಾಲ್ಲೂಕು
2. ಗ್ರಾಮ
3. ಲೈಸೆನ್ಸ ನಂಬರು
4. ಲೈಸೆನ್ಸದಾರನ ಹೆಸರು ಮತ್ತು ವಾಸಸ್ಥಳ ವಗೈರೆ
5. ಲೈಸೆನ್ಸದಾರನ ಕಸಬು
6. ಲೈಸೆನ್ಸಿನಲ್ಲಿ ದಾಖಲಾದ ತೇದಾದು
7. ಯಾವ ವನಗಳಲ್ಲಿ ಈಚಲುಗರಿ ಕಡಿಯತಕ್ಕದ್ದು
8. ಯಾವ ಬಗ್ಯಾಗಿ ಈಚಲುಗರಿ ಬೇಕಾಗಿರುತ್ತೆ
9. ಲೈಸೆನ್ಸ ವಾಪಸು ಮಾಡಬೇಕಾದ ವಾಯಿದೆ
10. ತಾರೀಖು

ಲೈಸೆನ್ಸ ಕೊಡುವ ಆಫೀಸರ ರುಜು ವ ಹುದ್ದೆ.

ತಾರೀಖು 20ನೇ ಜೂ 1889.

ನಂ. 75.—ಮೆ॥ ಎಲ್. ರಿಕ್ಕೆಟ್ಸ್ ಯವರು, 1889ನೇ ಇಸವಿ ಜೂ 8ನೇ ಮಾರ್ತು ಮಿನ ಪೂರ್ವಾನ್ಹದಲ್ಲಿ ಪೊಲೀಸ್ ಇನ್ಸ್ಪೆಕ್ಟರ ಜನರಲ್ ಆಫೀಸು, ಫಾರೆಸ್ಟ್ ಆಫೀಸು ಮತ್ತು ಸ್ಟ್ಯಾಟಿಸ್ಟಿಕ್ಸ ವ ಅಗ್ರಿಕಲ್ಚುರಲ್‌ಗಳ ಡೈರೆಕ್ಟರ ಆಫೀಸುಗಳ ಬಾರ್ಜನ್ನು ವಹಿಸಿ ರುತ್ತಾರೆ.

ನಂ. 76.—ಅಸಿಸ್ಟೆಂಟ್ ಕಮ್ಮಿಷನರ ಮೆ॥ ಎ. ವೆಂಕಟರಾಯರು, ದೆಂಗಳೂರು ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮ್ಮಿಷನರ ಆಫೀಸ್ ಬಾರ್ಜನ್ನು 1889ನೇ ಇಸವಿ ಜೂ 10ನೇ ಮಾರ್ತು ಮಿನ ಅಪರಾನ್ಹದಲ್ಲಿ ಮೆ॥ ರಘುನಾಥರಾಯರಿಗೆ ಒಪ್ಪಿಸಿರುತ್ತಾರೆ.

ನಂ. 77.—ಹೊನ್ನಾಳಿ ತಾಲ್ಲೂಕು ಅಮಲ್ದಾರ ಲಾಜರಸ್ ಡುಮಿಂಗೋಯವರಿಗೆ, 1889ನೇ ಇಸವಿ ಜನವರೀ 9ನೇ ಮಾರ್ತುಂ 187ನೇ ನಂಬರ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಮೂರು ತಿಂಗಳ ಪ್ರಿವಿಲೀಜ್ ರಜಾನ್ನು, ಅವರ ಖಾಯಿಷ್ ಮೇರೆ ರದ್ದು ಮಾಡಲ್ಪಟ್ಟಿರುತ್ತೆ.

ನಂ. 81.—ಹಾಸನ ಡಿಸ್ಟ್ರಿಕ್ಟ್ ಸಬ್ ಅಸಿಸ್ಟೆಂಟ್ ಕ್ಯಾನರವೇಟರ ಮೆ॥ ಮುದ್ದಪ್ಪನವರು, ಅವರಿಗೆ 1889ನೇ ಇಸವಿ ಮೇ 17ನೇ ಮಾರ್ತುಂ 1144—128ನೇ ನಂಬರ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಮೂರು ವಾರಗಳ ಪ್ರಿವಿಲೀಜ್ ರಜಾವನ್ನು 1889ನೇ ಇಸವಿ ಮೇ 15ನೇ ಮಾರ್ತುಂ ಲಗಾಯತು ಉಪಯೋಗಿಸಿಕೊಂಡು ಅದೇ ತಿಂಗಳು 25ನೇ ತಾರೀಖಿನಲ್ಲಿ ಮರಳಿ ಕೆಲಸದಮೇಲೆ ಬಂದಿರುತ್ತಾರಾಗಿ ಉಪಯೋಗಿಸಿಕೊಳ್ಳದೆ ಅಂದರೆ 11 ದಿವಸಗಳ ರಜಾ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 21ನೇ ಜೂ 1889.

ನಂ. 78.—ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕ್ಯಾನರವೇಟರ ಮೆ॥ ಶ್ರೀನಿವಾಸರಾಯರು, ಕಳೆದ ಏಪ್ರೆಲ್ 25ನೇ ಮಾರ್ತುಮಿನಲ್ಲಿ ಮರಳಿ ಉದ್ಯೋಗದ ಮೇಲೆ ಬಂದಿರುತ್ತಾರಾಗಿ ಅವರಿಗೆ 1889ನೇ ಇಸವಿ ಜೂ 11ನೇ ಮಾರ್ತುಂ 71ನೇ ನಂಬರ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ರಜಾಕ್ಕೆ ಉಳಿದ ಯರಡುದಿವಸಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 79.—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12—32—206 ಮತ್ತು 357ನೇ ಸೆಕ್ಷನ್‌ಗಳನುಸರಿಸಿ ಕೋಲಾರದ ಮುನ್ಸೀಫ್. ಯಸ್. ನಾರಾಯಣರಾಯರಿಗೆ ಇದರಡಿಕಂಡ ಅಧಿಕಾರಗಳು ಕೊಡಲ್ಪಟ್ಟಿರುತ್ತೆ.

1. ಯರಜನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳು.
2. ಭಡಿಸಜಾ ಕೊಡುವ ಬಗ್ಯೆ ಅಧಿಕಾರ.
3. ಸೆಷನ್ಸ್‌ಕೋರ್ಟ್‌ಗೆ ದರಿಯಾಫ್ತ್ ಬಗ್ಯೆ ಕಮ್ಮಿಟ್ ಮಾಡಲು ಅಧಿಕಾರ.
4. ಸಾಕ್ಷಿಗಳ ವಾಂಗ್ಮೂಲವನ್ನು ಸ್ವದಸ್ತೂರ್ ಇಂಗ್ಲಿಷ್ ಭಾಷೆಯಲ್ಲಿ ಬರೆದುಕೊಳ್ಳುವದಕ್ಕೆ ಅಧಿಕಾರ.

ನಂ. 80.—ತುಮಕೂರು ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮ್ಮಿಷನರ ಮೆ॥ ಪಿ. ಪಂಚನಾಥರಾಯರು, 1889ನೇ ಇಸವಿ ಫಿಬ್ರವರಿ 2ನೇ ಮಾರ್ತುಂ 199ನೇ ನಂಬರ ಇಸ್ತಿಹಾರ್ ನಾಮೆಯಿಂದ ಅವರಿಗೆ ಕೊಡಲ್ಪಟ್ಟ ಯರಡು ತಿಂಗಳ ಪ್ರಿವಿಲೀಜ್ ರಜಾವನ್ನು ಮೇ 20ನೇ ಮಾರ್ತುಂ ಲಾಗಾಯತು ಉಪಯೋಗಿಸಿಕೊಂಡು 1889ನೇ ಇಸವಿ ಜೂ 6ನೇ ಮಾರ್ತುಮಿನಲ್ಲಿ ಮರಳಿ ಉದ್ಯೋಗದ ಮೇಲೆ ಬಂದಿರುತ್ತಾರಾಗಿ ಉಳಿದಭಾಗ ಅಂದರೆ ಎಂದುತಿಂಗಳೂ 13 ದಿವಸಗಳ ರಜಾ ಇದರದೆಯಿಂದ ರದ್ದು ಮಾಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 347.—ಮಾಲೂರು ತಾಲ್ಲೂಕು ಅಮಲ್ದಾರ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾದ ಮಿರ್ನಿಜಾಮುದ್ದೀನ್ ಅಲ್ಲೀ ಖಾನ್‌ರಿಗೆ ಮುಂದಿನ ತಿಂಗಳು 2ನೇ ಮಾರ್ತುಂ ಲಗಾಯತು ಯಾ ಅವರು ಉಪಯೋಗಿಸಿಕೊಂಡ ತಾರೀಖು ಮೊದಲು ಬಂದು ತಿಂಗಳೂ ಜಬುಮೂರು ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮಿರ್ ನಿಜಾಮುದ್ದೀನ್ ಅಲ್ಲೀಬರ್ಲಾರು ರಜಾದಮೇಲೆರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಕಿರಸ್ತೇದಾರ್ ನಾರಾಯಣಸಾಮಿ ನಾಯುಡರು ಸದರೀ ತಾಲ್ಲೂಕು ಚಾರ್ಜ್ ವಹಿಸಿರತಕ್ಕದ್ದು. ಅವರು ಸದರೀ ತಾಲ್ಲೂಕು ಚಾರ್ಜ್‌ವಹಿಸಿರುವ ಕಾಲದಲ್ಲಿ ಚೆಲಾಯಿಸತಕ್ಕ ಬಗ್ಗೆ ಅವರಿಗೆ ಇದರದೇಕೆಯಿಂದ ಮೂವನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತೆ.

ತಾರೀಖು 22ನೇ ಜೂ 1889.

ಕ್ಯಾಂಪ್ ನಂ. 357.—ಹಾಸನದ ಡಿಸ್ಟ್ರಿಕ್ಟು ಪೋಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಡಿ. ದೇವರಾಜೇ ಅರಸಿನವರಿಗೆ, 1889ನೇ ಇಸವಿ ಮೇ 14ನೇ ಮತ್ತು ಂ 46ನೇ ನಂಬರ್‌ಉಳ್ಳ ಈ ಆಫೀಸ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಬಂದುತಿಂಗಳ ಪ್ರಿವಿಲೇಜ್ ರಜಾ ಯನಮತಿಂಗಳ ಪರಿಯಂತ ಜಾಸ್ತೀ ಮಾಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 361.—ತ್ಯಾನಿವಾಸಪುರದ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ವಿ. ಆರ್. ಗೋಪಾಲರಾಯರಿಗೆ, ಈ ಆಫೀಸ್ 1889ನೇ ಇಸವಿ ಮೇ 14ನೇ ಮತ್ತು ಂ ಕ್ಯಾಂಪ್ ನಂಬರ್ 85ನೇ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ವಂದುತಿಂಗಳ ಪ್ರಿವಿಲೇಜ್ ರಜಾವು ಯಿನ್ನೂ ವಂದುವಾರದ ಪರಿಯಂತ ಜಾಸ್ತಿ ಮಾಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 364.—ಟಿ. ಆರ್. ವಾಜನಾಯಿಗಂಪಳ್ಳೀ ಯಂಬುವರಿಗೆ, 1889ನೇ ಇಸವಿ ಜೂ 4ನೇ ಮತ್ತು ಂ ಲಗಾಯ್ದು ತು ಆರುತಿಂಗಳ ಪರಿಯಂತ ಅಜವಾಯಿಷಿ ತರೀಕ್ ಯರಡನೇ ಗ್ರೇಡ್ ಅಸ್ಸಿಟಲ್ ಅಸಿಸ್ಟೆಂಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತೆ.

ತಾರೀಖು 24ನೇ ಜೂ 1889.

ನಂ. 82.—ಫಾರೆಸ್ಟ್ರ ವ ಗವರ್ಮೆಂಟ್ ತೋಟಗಳ ಸೂಪರ್‌ಟೆಂಡಿಂಟರಾವ ಮೆ|| ಸಿ. ಈ. ಯಂ. ರನ್ಸಿಲೆಯವರಿಗೆ, 1889ನೇ ಇಸವಿ ಏಪ್ರೆಲ್ 15ನೇ ಮತ್ತು ಂ 251—3ನೇ ನಂಬರ್ ಲೆಟರ್‌ನಲ್ಲಿ ಕೊಡಲ್ಪಟ್ಟ, ಪರೀಕ್ಷಾ ರಜಾ ಅನುಸರಿಸಿ 15 ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 25ನೇ ಜೂ 1889.

ನಂ. 83.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನೆಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಸರ್ವಮಾನ್ಯದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈಕೆಳಗೆ ಕಂಡ ಸರ್ವಮಾನ್ಯ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪ್ರಾರಂಭವಾಗಿ ಉಳಿಕೆಯಾವದೂ ಇಲ್ಲದೆ ಗ್ರಾಮವು ಚಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಾರ್ಜಾಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಚ್ಚಾಯ್ರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ ಪೈಕಿ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್‌ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತುಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತುಮಾಡುತ್ತಾರೆಯೋ ಎಂಬುದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತನ್ನ ಮುಖ್ಯಸ್ಥರಿಂದ ರುಜಾ ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಪಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಸಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮನ್ಸೂಕೂಫ್ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹಕ್ಕಾಜ್ ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲನ್ನು ಪೂರ್ತಿಯಾಗಿ ಪಾವತಿ ಮಾಡಿ ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು ಕ್ರಯದಾರನ ಹೆಸರಿನಲ್ಲಿ ರಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಹೋಣಾವ ಬಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಸ್ಬೀಲ್ಲುಗಳಿಗೆ ಅಂದಾಜು ಬೀಜವರ್ಷ ವಿಷಯವಲ್ಲುಗಳಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು ಸದರೀ ಹರಾಜಿನಿಂದ ನುಕ್ಸಾ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವ್ಹಾರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ ಅಂಥಾ ಅಪ್ಪೀಲಿನಲ್ಲಿ ಆಗುವ ಆಜ್ಞೆಯ ಹುಕುಮಿಗೆ ಸದರೀ ಕ್ರಯವು ವಳಪಟ್ಟು ಯಿರುತ್ತೆ.

ಜಿಲ್ಲೆ.	ತಾಲ್ಲೂಕು.	ಹೋಬಳಿ.	ಗ್ರಾಮ.	ಸರ್ವಾನುನ್ಯದಾರರ ಹೆಸರು.	ಅಂದಾಜು ಬೀಜವರೀ.	ಅಂದಾಜು ಹುಟ್ಟುವಳೀ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವ ಬಾಕೀಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
ಮೈಸೂರು.	ಯಡತೊರೆ.	ಹನಸೋಗೆ.	ಬೆಕ್ಕಹಳ್ಳಿ.	ಯಡತೊರೆ ವೆಂಕಟಸುಬ್ಬಯ್ಯ, ಮಾಧವ ಕೃಷ್ಣಯ್ಯ, ಇತರ ಮೂರುಮಂದಿ.	ಖಂ. ಕೂ. ಪ. 15 0 0	ರೂ. ಆ. ಪೈ. 295 5 8	ರೂ. ಆ. ಪೈ. 289 0 5	ರೂ. ಆ. ಪೈ. 633 5 4 ಮತ್ತು ಬಡ್ಡಿ	ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್ರು ರೂಬರೂ 1889ನೇ ಇಸವಿ ಆಗಸ್ಟ್ ತಾರೀಖು 1ರಲ್ಲು

ಷರಾ.—ಸರ್ವನುನ್ಯದಾರರುಗಳಿಂದಲಾಗಲಿ, ಖಾದ್ಯತೆಯ ಮೂಲಕ ಯಿನರುಗಳಿಗೆ ಹಿಂದೆ ಯಿದ್ದವರಿಂದಾಗಲಿ, ಉಂಟುಮಾಡಲ್ಪಟ್ಟ ತಮ್ಮಾ ಹಿಡುವಳಿಗಾಗಲಿ, ದೇಣಿಗಳಿಗಾಗಲಿ ಮತ್ತು ಹಕ್ಕುಗಳಿಗಾಗಲಿ, ಆಥವಾ ಮಾತ್ಯಾವ ಸಂಬಂಧಗಳಿಗಾಗಲಿ ಸದರೀ ಹರಾಜು ವಳಪಟ್ಟಿರುವದಿಲ್ಲವು.

ತಾರೀಖು 26ನೇ ಜೂ ೧೮೮೯.

ನಂ. 84.—ಅಸಿಸ್ಟೆಂಟ್ ಸೆಟ್ಲ್‌ಮೆಂಟ್ ಆಫೀಸರಾದ ಮೆ॥ ಈ. ಹೆಚ್. ಬುಚ್ಚರ್ ಯವರು, 1889ನೇ ಇಸವಿ ಜೂ 8ನೇ ಮರ್ಕುಮಿನಲ್ಲಿ ಅಫೀಸಿವ್ಯಾಳ್ಯ ಮುಗಿದ ತರುವಾಯ ಕೆಲಸದ ಮೇಲೆ ಬಂದಿರುವದರಿಂದ, 1888ನೇ ಇಸವಿ ಆಗಸ್ಟ್ 13ನೇ ಮರ್ಕುಂ 107ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಅವರಿಗೆ ಕೊಡಲ್ಪಟ್ಟ ಇಂಡಿಯಾದೇಶದಲ್ಲಿನ ಪರಲೋ ರಜಾ ಪೈಕಿ ಉಳಿದಭಾಗ ಅಂದರೆ 2 ತಿಂಗಳು 29 ದಿವಸಗಳ ರಜಾ ಇದರದೆಕೆಯಿಂದ ರದ್ದು ಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜೀವ್,
ಆರ್. ವಿಜಯೀಂದ್ರರಾವ್,
ಜೀಫ್ ಸೆಕ್ರಟೆರಿ.

ವಿದ್ಯಾಭ್ಯಾಸದ ಇಲಾಖೆ.

ಸ್ ೧೮೮೯ನೇ ಇಸವಿ ಮೇ ತಾರೀಖು 6.

ಮೈಸೂರು ದೇಶೀ ಪರೀಕ್ಷೆ.

ಸ್ ೧೮೯೦ನೇ ಇಸವಿಯಲ್ಲಿ ನಡೆಯುವ ಮೈಸೂರು ದೇಶೀಯ ಪರೀಕ್ಷೆಗೋಸ್ಕರ ಈ ಕೆಳಗೆ ನಮೂದಿಸಲ್ಪಟ್ಟಂತೆ ಬಹುಮಾನಗಳು ಚಿಂತಾಮಣೀ ತಾಲ್ಲೂಕು ಗವರ್ಮೆಂಟ್ ಕನ್ನಡ ಸ್ಕೂಲ್ ಹೆಡ್ ಮಾಸ್ಟರಾದ, ಆಳಿಂಗ್ಯಾಚಾರ್ಯರಿಂದ ಕೊಡಲ್ಪಡುವವು:—

(i) ಕಿಡ್ಡಘಟ್ಟ ತಾಲ್ಲೂಕು ಗವರ್ಮೆಂಟ್ ಕನ್ನಡ ಸ್ಕೂಲಿನಲ್ಲಿ ತೇರ್ಗಡೆ ಹೊಂದುವವರ ಪೈಕಿ 'ಕನ್ನಡ ಭಾಷಾ ಗ್ರಂಥಗಳಲ್ಲಿ' ಅಧಿಕವಾದ ನಂಬರುಗಳನ್ನ ಪಡೆಯುವಂಥಾ ದೇಶೀ ಪರೀಕ್ಷಾ ವಿದ್ಯಾರ್ಥಿಗೆ 'ಕನ್ನಡ ಸಟೀಕಾ ಗುರುಬಾಲಪ್ರಬೋಧಿಕ'

(ii) ಕಿಡ್ಡಘಟ್ಟ ತಾಲ್ಲೂಕು ಗವರ್ಮೆಂಟು ಕನ್ನಡ ಸ್ಕೂಲಿನಲ್ಲಿ ತೇರ್ಗಡೆ ಹೊಂದುವವರ ಪೈಕಿ 'ಗಣಿತದಲ್ಲಿ' ಅಧಿಕವಾದ ನಂಬರುಗಳನ್ನ ಪಡೆಯುವಂಥಾ ದೇಶೀ ಪರೀಕ್ಷಾ ವಿದ್ಯಾರ್ಥಿಗೆ.— 'ಅಷ್ಟಾದಶಪರ್ವ ಕನ್ನಡ ಮಹಾಭಾರತ ಮೂಲ.'

(iii) ಸ್ ೧೮೯೦ನೇ ಇಸವಿಯಲ್ಲಿ ನಡೆಯುವ ಮೈಸೂರು ದೇಶೀಯೋಪಾಧ್ಯಾಯರ ಪರೀಕ್ಷೆಯಲ್ಲಿ ಕನ್ನಡದಲ್ಲಿ ತೇರ್ಗಡೆಯಾಗುವವರ ಪೈಕಿ 'ಶಾಸ್ತ್ರದಲ್ಲಿ' ಮೈಸೂರು ಸೀಮೆಯಲ್ಲಿ ಅಧಿಕವಾದ ನಂಬರುಗಳನ್ನ ಪಡೆಯುವಂಥಾವರಿಗೆ ಮೂವ್ವತ್ತನಾಲ್ಕು ಸಂಧಿಗಳುಳ್ಳ ಸಟೀಕಾ ಕನ್ನಡ ಜೈಮಿನಿ ಭಾರತ ಎಂದು ಬಿದತಕ್ಕದ್ದು.

ಸ್ ೧೮೮೯ನೇ ಇಸವಿ ಜೂ ತಾರೀಖು 19.

ಮೈಸೂರು ದೇಶೀಯ ಪರೀಕ್ಷೆ.

ಸ್ ೧೮೯೦ನೇ ಇಸವಿಯಲ್ಲಿ ನಡೆಯುವ ಮೈಸೂರು ದೇಶೀಯ ಪರೀಕ್ಷೆಗಾಗಿ, ಈ ಕೆಳಗೆ ನಮೂದಿಸಿರುವಂತೆ, ಬಹುಮಾನಗಳು, ಕಾರ್ಕಾರ್‌ಹಳ್ಳೀ ತಾಲ್ಲೂಕು ಗವರ್ಮೆಂಟ್ ಕನ್ನಡ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರಾದ ತಿಮ್ಮಪ್ಪಯ್ಯನವರಿಂದ ಕೊಡಲ್ಪಡುವವು:—

(i) ಕಾರ್ಕಾರ್‌ಹಳ್ಳೀ ತಾಲ್ಲೂಕು ಗವರ್ಮೆಂಟ್ ಕನ್ನಡ ಸ್ಕೂಲಿನಿಂದ ತೇರ್ಗಡೆಹೊಂದುವವರ ಪೈಕಿ ಗಣಿತದಲ್ಲಿ ಅಧಿಕಾವಾದ ನಂಬರುಗಳನ್ನ ಹೊಂದುವಂಥಾ ದೇಶೀಪರೀಕ್ಷಾ ವಿದ್ಯಾರ್ಥಿಗೆ—ಆಷ್ಟಾದಶಪರ್ವ ಕನ್ನಡ ಮಹಾಭಾರತ.

(ii) ಕಾರ್ಕಾರ್‌ಹಳ್ಳೀ ತಾಲ್ಲೂಕು ಗವರ್ಮೆಂಟ್ ಕನ್ನಡ ಸ್ಕೂಲಿನಿಂದ ತೇರ್ಗಡೆಹೊಂದುವವರ ಪೈಕಿ ಕನ್ನಡಭಾಷಾ ಗ್ರಂಥಗಳಲ್ಲಿ ಅಧಿಕವಾದ ನಂಬರುಗಳನ್ನ ಹೊಂದುವಂಥಾ ದೇಶೀಪರೀಕ್ಷಾ ವಿದ್ಯಾರ್ಥಿಗೆ—ಶಬ್ದಮಣಿದರ್ಪಣ, ಬೆಂಗಳೂರು ಛಾಪೆ.

ಎಲ್. ರೈಸ್,
ಎಡ್ಯುಕೇಷನ್ ಸೆಕ್ರಟೆರಿ.